**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಸಿ.ಸಿ.ನಂ. 31/2025**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ಉಪ-ನಿರೀಕ್ಷಕರು,
ಹೊನ್ನಾವರ ಪೋಲಿಸ್ ಠಾಣೆ , ಹೊನ್ನಾವರ.

**-ವಿರುದ್ಧ-**

ಆರೋಪಿಃ

1. ಸತೀಶ ಗಜಾನನ ನಾಯ್ಕ,
ವಯಸ್ಸುಃ 32 ವರ್ಷಗಳು,
ಉದ್ಯೋಗಃ ಕೂಲಿ,
ಸಾಕೀನಃ ಹುಂಬಾಹಿತ್ಲಕೇರಿ, ಜಲವಳ್ಳಿಕರ್ಕಿ,
ತಾಲೂಕುಃ ಹೊನ್ನಾವರ.

2. ಸುನೀಲ ಗಜಾನನ ನಾಯ್ಕ,
ವಯಸ್ಸುಃ 30 ವರ್ಷಗಳು,
ಉದ್ಯೋಗಃ ಕೂಲಿ,
ಸಾಕೀನಃ ಹುಂಬಾಹಿತ್ಲಕೇರಿ, ಜಲವಳ್ಳಿಕರ್ಕಿ,
ತಾಲೂಕುಃ ಹೊನ್ನಾವರ.

3. ಉದಯ ಮಾದೇವ ನಾಯ್ಕ,
ವಯಸ್ಸುಃ 39 ವರ್ಷಗಳು,
ಉದ್ಯೋಗಃ ಕೂಲಿ,
ಸಾಕೀನಃ ಹುಂಬಾಹಿತ್ಲಕೇರಿ, ಜಲವಳ್ಳಿಕರ್ಕಿ,
ತಾಲೂಕುಃ ಹೊನ್ನಾವರ.

4. ಸೀತಾರಾಮ ಹನುಮಂತ ನಾಯ್ಕ,
ವಯಸ್ಸುಃ 43 ವರ್ಷಗಳು,
ಉದ್ಯೋಗಃ ಕೂಲಿ,
ಸಾಕೀನಃ ಹುಂಬಾಹಿತ್ಲಕೇರಿ, ಜಲವಳ್ಳಿಕರ್ಕಿ,
ತಾಲೂಕುಃ ಹೊನ್ನಾವರ.

**ದೋಷಾರೋಪಣೆ**

ಶ್ರೀ ಕುಮಾರ ಜಿ, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನ ಹೊರೆಸುತ್ತಿದ್ದೇನೆ.

1.ಮೊದಲೇಯದಾಗಿ ಆರೋಪಿತರಾದ ನೀವು ದಿನಾಂಕಃ 28-10-2024 ರಂದು ರಾತ್ರಿ 08-30ರ ಸಮಯದಲ್ಲಿ ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯ ಹೊನ್ನಾವರ ತಾಲೂಕಾ ಜಲವಳಕರ್ಕಿ, ಹುಂಬಾರಹಿತ್ಲಕೇರಿಯಲ್ಲಿ ಪಂಚಾಯತಿ ಕಡೆಯಿಂದ ಹುಂಬಾರಹಿತ್ಲಕೇರಿ ಕಡೆಗೆ ಕಾಲುದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಚಾ.ಸಾ. 1 ರವರಾದ ಸಂತೋಷ ನಾರಾಯಣ ಗೌಡ ರವರಿಗೆ ಹಲ್ಲೆ ಮಾಡಬೇಕೆಂಬ ಸಮಾನ ಉದ್ದೇಶದಿಂದ ಅವರನ್ನು ಅಡ್ಡಹಾಕಿ ತಡೆದು ಭಾರತೀಯ ನ್ಯಾಯ ಸಂಹಿತೆ ಕಲಂ 126(2) ಸಹವಾಚಿತ ಕಲಂ 3(5) ರಡಿಯಲ್ಲಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

2.ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರ ಹಲ್ಲೆ ಮಾಡಬೇಕೆಂಬ ಸಮಾನ ಉದ್ದೇಶದ ಕಾರಣಕ್ಕೆ 1 ನೇ ಆರೋಪಿಯು ಚಾಸಾ-1ರವರಿಗೆ "ಸೂಳೆಮಗನೇ, ನಿನ್ನನ್ನು ಸುಮ್ಮನೆ ಬಿಡುವುದಿಲ್ಲ" ಎಂದು ಆತನ ಸಾರ್ವಜನಿಕ ನೆಮ್ಮದಿಗೆ ಭಂಗ ತರುವಂತೆ ಅವಾಚ್ಯ ಶಬ್ದಗಳಿಂದ ಬೈದು ಭಾರತೀಯ ನ್ಯಾಯ ಸಂಹಿತೆ ಕಲಂ 352 ಸಹವಾಚಿತ ಕಲಂ 3(5) ರಡಿಯಲ್ಲಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

3.ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರ ಹಲ್ಲೆ ಮಾಡಬೇಕೆಂಬ ಸಮಾನ ಉದ್ದೇಶದ ಕಾರಣಕ್ಕೆ 2 ರಿಂದ 4 ಆರೋಪಿತರು ತಮ್ಮ ಕೈಯಿಂದ ಚಾಸಾ-1ರವರಿಗೆ ಮೈಮೇಲೆ ಹೊಡೆದು ಸಾದಾ ಪ್ರಮಾಣದ ಮೈ ಕೈ ನೋವು ಪಡಿಸಿ ಭಾರತೀಯ ನ್ಯಾಯ ಸಂಹಿತೆ ಕಲಂ 115(2) ಸಹವಾಚಿತ ಕಲಂ 3(5) ರಡಿಯಲ್ಲಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

4.ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರ ಹಲ್ಲೆ ಮಾಡಬೇಕೆಂಬ ಸಮಾನ ಉದ್ದೇಶದ ಕಾರಣಕ್ಕೆ 1 ನೇ ಆರೋಪಿಯು ಕಟ್ಟಿಗೆ ಬಡಿಗೆಯಿಂದ ಚಾ.ಸಾ. 1 ರವರ ಎಡ ಕಾಲಿಗೆ ಬೀಸಿ ಹೊಡೆದು ಚಾ.ಸಾ. 1 ರವರ ಎಡಕಾಲಿಗೆ ಗಂಭೀರ ಸ್ವರೂಪದ ಗಾಯ ಪಡಿಸಿ ಆರೋಪಿತರಾದ ನೀವೆಲ್ಲರೂ ಸ್ಥಳದಿಂದ ಓಡಿ ಹೋಗಿ ಭಾರತೀಯ ನ್ಯಾಯ ಸಂಹಿತೆ ಕಲಂ 118(2) ಸಹವಾಚಿತ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದಿರಿ ಎಂದು ಆರೋಪಿಸಲಾಗಿದೆ.

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದ್ದಿರಾ? ಅದು ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಸದರಿ ದೋಷಾರೋಪಣೆಗಳನ್ನ ಆರೋಪಿ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಆತ ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

Sd/-

ದಿನಾಂಕಃ 11-07-2025.
ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯದಂಡಾಧಿಕಾರಿಗಳು, ಹೊನ್ನಾವರ.**